**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 54/2022**

**ಸಾಕ್ಷಿಗೆ ದಿನಾಂಕ 15.10.2024 ರಂದು ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಜಾವೀದ್ | ಪಿ.ಡಬ್ಲ್ಯೂ-1 |
| ತಂದೆಯ/ಗಂಡನ ಹೆಸರು | : | ಎಸ್.ಎಂ.ಪಾಷ | ಸಿ.ಡಬ್ಲ್ಯೂ-1 |
| ವಯಸ್ಸು | : | 47 | |
| ಉದ್ಯೋಗ | : | ಚಾಲಕ | |
| ವಾಸಸ್ಥಳ | : | ಸರಗೂರು | |

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಅಪಘಾತದಲ್ಲಿ ಮೃತಪಟ್ಟ ಶಹಜಾದ್ ನನ್ನ ದೊಡ್ಡಪ್ಪನ ಮಗ. ಚಾಸ 6 ನನ್ನ ಚಿಕ್ಕಪ್ಪನ ಮಗ. ಚಾಸ 17 ನನ್ನ ಅತ್ತಿಗೆ. ಚಾಸ 4 ರವರು ಚಾಸ 17 ರವರ ಮಗಳಾಗಿರುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯವಿರುತ್ತದೆ. ಈಗ ಸುಮಾರು 2 ವರ್ಷದ ಹಿಂದೆ ಹ್ಯಾಂಡಪೋಸ್ಟನಿಂದ ಕರೆ ಮಾಡಿ ನನ್ನ ದೊಡ್ಡಪ್ಪನ ಮಗನಾದ ಶಹಜಾದ್ ರವರಿಗೆ ಹ್ಯಾಂಡಪೋಸ್ಟ ಸರ್ಕಲ್ ಹತ್ತಿರ ಅಪಘಾತವಾಗಿ ಹೆಚ್.ಡಿ.ಕೋಟೆ ಅಸ್ಪತ್ರೆಗೆ ಕರೆದುಕೊಂಡು ಹೋಗಿರುವುದಾಗಿ ತಿಳಿಸಿರುತ್ತಾರೆ. ನಂತರ ನಾನು ಹೆಚ್.ಡಿ.ಕೋಟೆ ಆಸ್ಪತ್ರೆಯ ಶವಗಾರಕ್ಕೆ ಬಂದು ನೋಡಿದಾಗ ನನ್ನ ದೊಡ್ಡಪ್ಪನ ಮಗ ಶಹಜಾದ್ ರವರ ತಲೆ ಹಾಗೂ ಕಾಲಿಗೆ ಪೆಟ್ಟಾಗಿ ತೀರಿಕೊಂಡಿದ್ದರು. ನಂತರ ನಾನು ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಸದರಿ ಅಪಘಾತವು ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಸಾಕ್ಷಿದಾರರು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ1 ಎಂದು, ಸಾಕ್ಷಿಯ ಸಹಿಯನ್ನು ನಿಪಿ1 ಎ ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದರಿಂದ ಅನುಮತಿಯನ್ನು ನೀಡಲಾಯಿತು.)

**ಪಾಟೀಸವಾಲುಃ ಎಪಿಪಿ ರವರಿಂದಃ**

ದಿನಾಂಕ 30.11.2021 ರಂದು ಬೆಳಿಗ್ಗೆ 5 ಗಂಟೆಯಲ್ಲಿ ನನ್ನ ದೊಡ್ಡಪ್ಪನ ಮಗನಾದ ಶಹಜಾದ್ ರವರು ಹೆಚ್.ಮಟಕೆರೆಯಲ್ಲಿರುವ ತಮ್ಮ ಮಗಳನ್ನು ನೋಡಿಕೊಂಡು ಹೋಗುವ ಸಲುವಾಗಿ ಅವರಿಗೆ ಸಂಬಂಧಪಟ್ಟ ಕೆಎ 45 ಇಸಿ1256 ಬೈಕಿನಲ್ಲಿ ಸರಗೂರಿಗೆ ಹೊರಟಿದ್ದು ಬೆಳಿಗ್ಗೆ 5.30 ರಲ್ಲಿ ಹ್ಯಾಂಡಪೋಸ್ಟಿನ

ಪೆಟ್ರೋಲ್ ಬಂಕ್ ಹತ್ತಿರ 1ನೇ ಆರೋಪಿಗೆ ಸಂಬಂಧಪಟ್ಟ ಮಹಿಂದ್ರ ಜಿತೋ ವಾಹನ ಸಂಖ್ಯೆ ಕೆಎ 45 ಎ 0075 ವಾಹನವು ಅಪಘಾತಪಡಿಸಿರುತ್ತದೆ ಎಂದು, ಸದರಿ ಅಪಘಾತವು 1ನೇ ಆರೋಪಿಯ ಅಜಾಗರೂಕತೆಯಿಂದ ಆಗಿರುತ್ತದೆ ಎಂದು ಈಗ ಓದಿ ಹೇಳಿದಂತೆ ನಿಪಿ1 ರಂತೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನಿಪಿ1 ರಂತೆ ಆರೋಪಿತರ ವಿರುದ್ಧ ದೂರು ನೀಡಿದ್ದರೂ ಸಹ ರಾಜಿ ಮಾಡಿಕೊಂಡಿರುವ ಕಾರಣ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದಃ ಇಲ್ಲ

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ